ಪಿ.ಡಬ್ಲ್ಯು: 2

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 29-06-2026

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಿಂದಃ-

ನಾನು ಬೋಟಿನ ವ್ಯವಹಾರವನ್ನು 18 ವರ್ಷಗಳಿಂದ ಮಾಡುತ್ತಿದ್ದೇನೆ. ಬೋಟ್ ವ್ಯವಹಾರವನ್ನು ಮಾಡಲು ನಾನು ಮೀನುಗಾರಿಕೆ ಇಲಾಖೆಯಿಂದ ಲೈಸೆನ್ಸನ್ನು ಪಡೆದುಕೊಂಡಿರುತ್ತೇನೆ. ಲೈಸೆನ್ಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಬೋಟಿನಲ್ಲಿ ಜನರನ್ನು ಹಾಕಿಕೊಂಡು ಕೆಲಸ ಮಾಡಿಸುತ್ತೇನೆ. ನನ್ನ ಕೆಲಸಗಾರರಿಗೆ ಪಿ.ಎಫ್ ಇತ್ಯಾದಿ ಸೌಲಭ್ಯವನ್ನು ಕೊಡುತ್ತಿದ್ದೇನೆ. ಆರೋಪಿತರು ನನಗೆ ಸುಮಾರು 10 ವರ್ಷಗಳಿಂದ ಪರಿಚಿತರು. ಆಗಸ್ಟ್ 2022 ರಿಂದ ಮೇ 2023 ರವರೆಗೆ ನನ್ನ ಬೋಟಿಂಗ್ ನಲ್ಲಿ ಫಿಶಿಂಗ್ ಮಾಡಿಕೊಡುವ ಬಗ್ಗೆ ಅಗ್ರೀಮೆಂಟ್ ಆಗಿತ್ತು. ನನ್ನ ಬೋಟಿನಲ್ಲಿ ಮೊದಲೇ ಜನರು ಇದ್ದು ಆರೋಪಿತರು ಮೂವರನ್ನು ಕರೆದುಕೊಂಡು ಬರುತ್ತೇವೆ ಎಂದು ಹೇಳಿದ್ದರು. ಎಷ್ಟು ಫಿಶಿಂಗ್ ಆಗಿದೆಯೋ ಅದರ ಮೇಲೆ ಆರೋಪಿತರಿಗೆ ಪರ್ಸೆಂಟೇಜ್ ನೀಡುವ ಬಗ್ಗೆ ಮಾತುಕತೆಯಾಗಿತ್ತು. ಎಷ್ಟು ಪರ್ಸೆಂಟೇಜ್ ನೀಡಬೇಕು ಎನ್ನುವ ಬಗ್ಗೆ ಅಗ್ರೀಮೆಂಟ್ ಆಗಿಲ್ಲ. ಆಗಸ್ಟ್ 2022 ರಿಂದ ಮೇ 2023 ರವರೆಗೆ ಫಿಶಿಂಗ್ ಮಾಡಿಕೊಡಬೇಕು, ಒಂದೋಮ್ಮೆಗೆ ಬಿಟ್ಟು ಹೋದಲ್ಲಿ 3 ಜನರಿಗೆ ನೀಡಿದ ತಲಾ ರೂ.1,50,000/- ನೀಡಿದ ಹಣವನ್ನು ಹಿಂದಿರುಗಿಸಬೇಕು ಎಂದು ಅಗ್ರೀಮೆಂಟ್ ಆಗಿದೆ. ಅಗ್ರೀಮೆಂಟ್ ಸಮಯದಲ್ಲಿ ನಾನು ಅವರಿಂದ ಹಣ ಪಡೆದಿರುವುದಿಲ್ಲ. ಆರೋಪಿತರು ಒಂದು ಚೆಕ್ಕನ್ನು 02-05-2023 ರಂದು ಮತ್ತು ಇನ್ನೊಂದು ಚೆಕ್ಕನ್ನು 15-03-2023 ರಂದು ನೀಡಿದ್ದರು. ಆರೋಪಿತರು ಚೆಕ್ಕಿನಲ್ಲಿ ಬರವಣಿಗೆ ಮಾಡಿ ಸಹಿ ಮಾಡಿ ಎರಡೂ ಚೆಕ್ಕನ್ನು ನನಗೆ ನೀಡಿದ್ದರು. ಬ್ಯಾಂಕಿಗೆ ಚಕ್ಕನ್ನು ಸಲ್ಲಿಸುವ ಪೂರ್ವದಲ್ಲಿ ಆರೋಪಿತರಿಗೆ ಮಾಹಿತಿ ನೀಡಿದ್ದೆನು. ಪಿರ್ಯಾದಿ ಸಲ್ಲಿಸುವ ಪೂರ್ವದಲ್ಲಿ ಆರೋಪಿತರಿಗೆ ನಾನು ನೋಟಿಸ್ ನೀಡಿಲ್ಲ. ಬಡ್ಡಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿತರಿಂದ ನಾನು ಮೊದಲೇ ಚಕ್ಕನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಆರೋಪಿತರಿಂದ ಬರಬೇಕಾದ ಹಣವನ್ನು ಪೂರ್ತಿಯಾಗಿ ಅವರು ಹಿಂದಿರುಗಿಹಿಸಿದ್ದು, ಬಡ್ಡಿ ವ್ಯವಹಾರದ ಬಾಬ್ತು ಅವರು ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಬೋಟ್ ವ್ಯವಹಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

Sd/-

(ರೂಪಶ್ರೀ)

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**
**ಜೆ.ಎಂ.ಎಫ್.ಸಿ., ಭಟ್ಕಳ**